1	2		3	4
9.	"	134	59.51	30.98
10.	"	134		
		(Syphon)	89.00	35.05
11.	"	135	43.65	48.57
12.	"	136	214.55	231.56
13.	"	137	229.45	246.09
14.	"	138	41.75	10.21
15.	"	139	26.15	17.48
16.	"	140	22.00	6.57
17.	"	141	26.65	24.58
18.	"	142	36.70	24.11

ಘಟಪ್ರಭಾ ಬಲದಂಡೆ ಕಾಲುವೆ.

1229 - ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬದಾಮಿ) : ಮಾನ್ಯ ಭಾರೀ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಘಟಪ್ರಭಾ ಬಲದಂಡೆ ಕಾಲುವೆ (ಕಿಮೀ) ಉದ್ದಳತೆ ಹಾಗೂ ಅದರ ಅಂದಾಜು ವೆಚ್ಚ ಎಷ್ಟು?

ಆ) ಘಟಪ್ರಭಾ ಬಲದಂಡೆ ಕಾಲುವೆಗಳಲ್ಲಿ ಎಷ್ಟು, ಕಾಲುವೆಗಳನ್ನು ಇದುವರೆಗೂ ಹಂಚಿಕೆ ಮಾಡಲಾಗಿದೆ (ಆರ್ಥಿಕ ಪ್ರಗತಿ ಮತ್ತು ಭೌತಿಕ ಪ್ರಗತಿ ತಿಳಿಸುವುದು)

ಇ) ಮುಂದಿನ ಕಾಮಗಾರಿಗಳು ಯಾವ ಹಂತದಲ್ಲಿವೆ (ಪ್ರತಿ ಕಿಮೀ. ವಿವರಣೆ ನೀಡುವುದು)

ಈ) ಕೃಷ್ಣ ಮೇಲ್ದಂಡೆ ಯೋಜನೆಯಲ್ಲಿ ಒಂದಾದ ಘಟಪ್ರಭಾ ಯೋಜನೆಯನ್ನು 2000ನೇ ಇಸ್ವಿಗೆ ಮುಗಿಸಲು ಸರ್ಕಾರದವರು ನಿಗದಿಪಡಿಸಿದ ಹಣ ಹಾಗೂ ಸಿಬ್ಬಂದಿ ವ್ಯವಸ್ಥೆ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಗಿದೆ?

ಶ್ರೀ ಕೆ. ಎನ್. ನಾಗೇಗೌಡ (ಭಾರೀ ನೀರಾವರಿ ಸಚಿವರು) :

ಅ) ಘಟಪ್ರಭಾ ಬಲದಂಡೆ ಕಾಲುವೆಯು 202 ಕಿಮೀ. ಉದ್ದವಿದ್ದು 86 ಕಿಮೀ. ಉದ್ದದ ಚಿಕ್ಕೋಡಿ ಶಾಖಾ ಕಾಲುವೆ ಮತ್ತು 32 ಕಿಮೀ. ಉದ್ದದ ಸಂಗಮ ಶಾಖಾ ಕಾಲುವೆಗಳನ್ನು ಹೊಂದಿರುತ್ತದೆ. 1995-96ರ ದರಗಳ ಪ್ರಕಾರ ಅಂದಾಜು ಮೊತ್ತ ರೂ. 521.46 ಕೋಟಿ ಇರುವುದು.

ಅ) ಘಟಪ್ರಭಾ ಬಲದಂಡೆ ಕಾಲುವೆಯ ಕಿಮೀ. 0 ರಿಂದ 47, 49 ರಿಂದ 54ರ ವರೆಗೆ ಕೆಲಸಗಳು ಈಗಾಗಲೇ ಪೂರ್ಣಗೊಂಡಿವೆ. ಕಿಮೀ. 48, 55 ರಿಂದ 76, 78ರಿಂದ 95ರ ವರೆಗಿನ ಕೆಲಸಗಳ ಗುತ್ತಿಗೆಗಳನ್ನು ವಹಿಸಲಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿವೆ. ಮಾರ್ಚ್ 98 ರವರೆಗೆ 11402ಹೆ ನೀರಾವರಿ ಕ್ಷೇತ್ರದ ಪ್ರಗತಿಯನ್ನು ಸಾಧಿಸಲಾಗಿದೆ. ಚಿಕ್ಕೋಡಿ ಶಾಖಾ ಕಾಲುವೆಯ ಕಿಮೀ. 37ರವರೆಗೆ, ಕಿಮೀ. 43,44,46ರಿಂದ 49 ಕಿಮೀ. ಕೆಲಸಗಳು ಪೂರ್ಣಗೊಂಡಿದ್ದು, ಕಿಮೀ.52ರ ವರೆಗಿನ ಬಾಕಿ ಕೆಲಸಗಳ ಗುತ್ತಿಗೆಗಳನ್ನು ವಹಿಸಲಾಗಿದೆ. ಕಾಮಗಾರಿಗಳು ಪ್ರಗತಿಯಲ್ಲಿವೆ. ಮಾರ್ಚ್ 98ರವರೆಗೆ 14841 ಹೆ.ನೀರಾವರಿ ಕ್ಷೇತ್ರದ ಪ್ರಗತಿಯನ್ನು ಸಾಧಿಸಲಾಗಿದೆ.

ಘಟಪ್ರಭಾ ಬಲದಂಡೆ ಕಾಲುವೆ, ಚಿಕ್ಕೋಡಿ ಶಾಖಾ ಕಾಲುವೆ ಹಾಗೂ ವಿತರಣಾ ಕಾಲುವೆಗಳ ಕೆಲಸಗಳಿಗೆ ಮಾರ್ಚ್ 98ರ ವರೆಗೆ ಒಟ್ಟು ರೂ. 189.74 ಕೋಟಿಗಳನ್ನು ವೆಚ್ಚ ಮಾಡಲಾಗಿದೆ.

ಇ) ಘಟಪ್ರಭಾ ಬಲದಂಡೆ ಕಾಲುವೆಯ ಕಿಮೀ.77ರ ಕೆಲಸಕ್ಕೆ ಟೆಂಡರ್ ಕರೆಯಲಾಗಿದೆ.

ಕಿಮೀ.96 ರಿಂದ 108ರವರೆಗೆ ಕಾಲುವೆಯ ಅಲೈನ್‌ಮೆಂಟ್‌ಗೆ ಮಂಜೂರಾತಿ ನೀಡಲಾಗಿದೆ.

ಕಿಮೀ.109 ರಿಂದ 122 ರವರೆಗೆ ಕಾಲುವೆಯ ಸರ್ವೆ ಸಮೀಕ್ಷೆಯು ಪೂರ್ಣಗೊಂಡಿದೆ.

ಕಿಮೀ. 122ರಿಂದ ಮುಂದೆ ಕಾಲುವೆಯ ಕಿಮೀ. 53 ರಿಂದ 55ರ ಕೆಲಸಗಳಿಗೆ ಟೆಂಡರ್‌ಕರೆಯಲಾಗಿದೆ.

ಕಿಮೀ. 56 ರಿಂದ 61ರವರೆಗೆ ಕಾಲುವೆಯ ಅಲೈನ್‌ಮೆಂಟ್‌ಗೆ ಅನುಮೋದನೆ ಹಂತದಲ್ಲಿದೆ.

ಈ) ಘಟಪ್ರಭಾ ಯೋಜನೆಯನ್ನು2000ನೇ ಇಸ್ವಿಯ ಒಳಗೆ ಪೂರ್ಣಗೊಳಿಸಲು ಕಾರ್ಯಕ್ರಮ ರೂಪಿಸಲಾಗಿದೆ. ಈ ಯೋಜನೆಯನ್ನು ಪೂರ್ಣಗೊಳಿಸಲು ಇನ್ನೂ ಬೇಕಾಗುವ ಬಾಕಿ ಮೊತ್ತವು ರೂ. 482.19 ಕೋಟಿ ಆಗುವುದು. ಇದರ ಪೈಕಿ9899ನೇ ಸಾಲಿಗಾಗಿ ರೂ.61.00 ಕೋಟಿ ಅನುದಾನವನ್ನು ಒದಗಿಸಲಾಗಿದೆ.

ಘಟಪ್ರಭಾ ಬಲದಂಡೆ ಕಾಲುವೆಯ ಕಿಮೀ.133ರ ಮುಂದಿನ ಕಿಮೀ.ಗಳ ಸರ್ವೆ ಹಾಗೂ ಅನ್ವೇಷಣೆ ಕೆಲಸ ಕೈಗೊಳ್ಳಲು ಗದ್ದನಕೇರಿಯಲ್ಲಿ ಒಂದು ಹೊಸ ವಿಭಾಗವನ್ನು ಒದಗಿಸಿದ್ದು ಕಾರ್ಯ ನಿರ್ವಹಿಸುತ್ತಿದೆ.

ಘಟಪ್ರಭಾ ಮಲಪ್ರಭಾ (ಕಾಡಾ) ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಇಲಾಖೆಯ ಯೋಜನೆ.

1230 - ಶ್ರೀ ಚಂದ್ರಶೇಖರನಾಯಕ್ (ಗೋಕಾಕ್) : ಮಾನ್ಯ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಘಟಪ್ರಭಾ ಮತ್ತು ಮಲಪ್ರಭಾ ಕಾಡಾ ಯೋಜನೆ ಅಡಿಯಲ್ಲಿ1994ರಿಂದ1998ರವರೆವಿಗೆ ಹಾಕಿಕೊಂಡಿರುವ ಯೋಜನೆಗಳು ಯಾವುವು?